# ಸಾಧನೆ–ಸಾರ್ಥಕ್ಯ



✸ ಒಂದು ಕಥೆ ಹೇಳುತ್ತೇನೆ ಕೇಳು: ಇಬ್ಬರು ಸಾಧುಗಳು ದೇಶಾಟನೆ ಮಾಡುತ್ತ ಮಾಡುತ್ತ ಒಂದು ಪಟ್ಟಣಕ್ಕೆ ಬಂದು ಸೇರಿದರು. ಒಬ್ಬ ಚಕಿತದೃಷ್ಟಿಯಿಂದಲೂ, ಆಶ್ಚರ್ಯದಿಂದಲೂ ಬಾಯಿ ತೆರೆದು ಪೇಟೆ, ಅಂಗಡಿ, ಮುಂಗಟ್ಟು , ಮನೆ-ಮಠ ಎಲ್ಲವನ್ನೂ ನೋಡುತ್ತಿದ್ದ. ಆ ಸಂದರ್ಭದಲ್ಲಿ ಆತ ತನ್ನ ಗೆಳೆಯ ಸಾಧುವನ್ನು ಸಂಧಿಸಿದ. ಆಗ ಆ ಸಾಧು ಈ ಸಾಧುವನ್ನು ಕೇಳಿದ: 'ನೀನು ಬಾಯಿ ತೆರೆದುಕೊಂಡು ಪಟ್ಟಣ ನೋಡುತ್ತಿದ್ದೀಯಲ್ಲ , ನಿನ್ನ ಗಂಟುಮೂಟೆಗಳೆಲ್ಲ ಎಲ್ಲಿ?' ಆತ ಹೇಳಿದ. 'ನಾನು ಮೊದಲು ಇಳಿದುಕೊಳ್ಳಲು ಕೊಠಡಿ ಪತ್ತೆ ಮಾಡಿ, ಅದರಲ್ಲಿ ಗಂಟುಮೂಟೆಗಳನ್ನೆಲ್ಲಾ ಇಟ್ಟು, ಕೊಠಡಿಗೆ ಬೀಗ ಹಾಕಿ, ನಿಶ್ಚಿಂತನಾಗಿ ಈಗ ಪಟ್ಟಣದಲ್ಲಿ ತಮಾಷೆ ನೋಡುತ್ತಿದ್ದೇನೆ.' ಅದಕ್ಕಾಗಿಯೇ ವಿಜಯ, ನಾನು ನಿನ್ನನ್ನು ಕೇಳಿದುದು, 'ಇಳಿದುಕೊಳ್ಳಲು ನಿನಗೆ ಕೊಠಡಿ ದೊರೆತಿರುವುದೇ' ಎಂದು.

✸ ಶ್ರೀಮದ್ಭಾಗವತದಲ್ಲಿ ಹೇಳಿದೆ, ಅವಧೂತನ ಇಪ್ಪತ್ತನಾಲ್ಕು ಗುರುಗಳಲ್ಲಿ ಹದ್ದೂ ಒಂದು ಎಂದು. ಒಂದು ಜಾಗದಲ್ಲಿ ಬೆಸ್ತರು ಮೀನು ಹಿಡಿಯುತ್ತಿದ್ದರು. ಒಂದು ಹದ್ದು ಮೇಲಿಂದ ಪಕ್ಕನೆ ಕೆಳಕ್ಕೆ ಇಳಿದುಬಂದು ಮೀನನ್ನು ಹಿಡಿದುಕೊಂಡು ಹೋಯಿತು. ಹದ್ದಿನ ಹತ್ತಿರ ಮೀನು ಇರುವುದನ್ನು ಕಂಡು, ಸಾವಿರಾರು ಕಾಗೆಗಳು ಅದರ ಬೆನ್ನು ಹತ್ತಿ 'ಕಾ, ಕಾ' ಅಂತ ಕೂಗುತ್ತ ಅದಕ್ಕೆ ಚಿತ್ರಹಿಂಸೆ ಕೊಡಲಾರಂಭಿಸಿದುವು. ಹದ್ದು ಮೀನಿನೊಡನೆ ಯಾವ ದಿಕ್ಕಿಗೆ ಹಾರಿಹೋದರೂ ಕಾಗೆಗಳೂ ಅದನ್ನು ಅಟ್ಟಿಸಿಕೊಂಡು ಆ ದಿಕ್ಕಿಗೇ ಹೋಗುತ್ತಿದ್ದುವು. ಹದ್ದು ಮೊದಲು ದಕ್ಷಿಣ ದಿಕ್ಕಿಗೆ ಹೋಯಿತು. ಬಳಿಕ ಉತ್ತರಕ್ಕೆ ಹೋಯಿತು. ಅಲ್ಲಿಗೂ ಅವು ಹೋದುವು. ಅನಂತರ ಪೂರ್ವ-ಪಶ್ಚಿಮ ದಿಕ್ಕುಗಳಿಗೆ ಹೋದರೂ ಅವು ಹಿಂಬಾಲಿಸುವುದನ್ನು ಬಿಡಲಿಲ್ಲ. ಕೊನೆಗೆ ಹದ್ದಿಗೆ ದಿಗ್ಭ್ರಮೆ ಹಿಡಿದು ಸಿಕ್ಕಿಸಿಕ್ಕಿದ ಕಡೆಗೆ ಹಾರುತ್ತಿದ್ದಾಗ ಮೀನು ಕಳಚಿಕೊಂಡು ಬಿದ್ದುಹೋಯಿತು. ಒಡನೇ ಕಾಗೆಗಳು ಹದ್ದನ್ನು ಸುಮ್ಮನೆ ಬಿಟ್ಟುಬಿಟ್ಟು ಮೀನಿನ ಕಡೆ ಹಾರಿ ಹೋಗಲಾರಂಭಿಸಿದುವು. ಹದ್ದು ಬಳಿಕ ನಿಶ್ಚಿಂತೆಯಿಂದ ಹಾರಿಹೋಗಿ ಒಂದು ಮರದ ಕೊಂಬೆಯ ಮೇಲೆ ಕುಳಿತು ಭಾವಿಸಲಾರಂಭಿಸಿತು: 'ಆ ಹಾಳಾದ ಮೀನೇ ನನ್ನ ಇಷ್ಟೊಂದು ತೊಂದರೆಗಳಿಗೆಲ್ಲಾ ಮೂಲ. ಈಗ ಅದನ್ನು ನಾನು ಬಿಸಾಡಿ ಬಿಟ್ಟಿರುವುದರಿಂದ ನಿಶ್ಚಿಂತನಾಗಿದ್ದೇನೆ.'

ಅವಧೂತ ಹದ್ದಿನಿಂದ ಈ ಕೆಳಗಿನ ಪಾಠ ಕಲಿತುಕೊಂಡ. ಎಲ್ಲಿಯವರೆಗೆ ಹತ್ತಿರ ಮೀನು ಇರುವುದೋ, ಎಂದರೆ ಕಾಮನೆ ಇರುವುದೋ, ಅಲ್ಲಿಯವರೆಗೆ ಪ್ರಾಪಂಚಿಕ ಕೆಲಸ ಕಾರ್ಯಗಳಲ್ಲಿ ತೊಡಗಿರಬೇಕಾಗುತ್ತದೆ. ಅದರಿಂದಾಗಿ ನಾನಾ ಭಾವನೆಗಳು, ಚಿಂತೆ ಹಾಗೂ ಅಶಾಂತಿ. ಕಾಮನಾತ್ಯಾಗವಾದೊಡನೆ ಕರ್ಮ ನಾಶವಾಗುತ್ತದೆ. ಶಾಂತಿ ದೊರೆಯುತ್ತದೆ.

✸ ಫುಟ್‌ಪಾತಿನಲ್ಲಿರುವ ಮರಗಳನ್ನು ನೀನು ನೋಡಿಲ್ಲವೇನು? ಅವು ಸಸಿಯಾಗಿರುವವರೆಗೆ ಬೇಲಿ ಹಾಕಬೇಕು. ಇಲ್ಲದಿದ್ದರೆ ದನ, ಕರು, ಆಡು, ಅವನ್ನು ತಿಂದುಬಿಡುತ್ತವೆ. ಆದರೆ ಗಿಡದ ಕಾಂಡ ದಪ್ಪವಾಯಿತು ಎಂದರೆ, ಬಳಿಕ ಬೇಲಿ ಬೇಕಾಗಿರುವುದಿಲ್ಲ. ಅನಂತರ ಅದಕ್ಕೆ ಆನೆಯನ್ನು ತಂದು ಕಟ್ಟಿದರೂ ಅದಕ್ಕೇನೂ ಆಗುವುದಿಲ್ಲ. ಅದೇ ರೀತಿಯಾಗಿ ನೀನು ಮನಸ್ಸನ್ನು ಬಲವಾದುದನ್ನಾಗಿ ಮಾಡಿಕೊಂಡು ಬಿಟ್ಟಿದ್ದೇ ಆದರೆ ಇನ್ನು ಚಿಂತೆಯೇನು? ಭಯವೇನು? ವಿವೇಕವನ್ನು ಗಳಿಸಿಕೊಳ್ಳಲು ಮೊದಲು ಪ್ರಯತ್ನಪಡು. ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣು ಬಿಡಿಸು. ಆಗ ಅದರ ಅಂಟು ಅಂಟಿಕೊಳ್ಳುವುದಿಲ್ಲ.

✸ ಆಧ್ಯಾತ್ಮಿಕ ಜೀವನದ ಮೊದಲ ಅವಸ್ಥೆಯಲ್ಲಿ ಬಹಳವಾಗಿ ಸುತ್ತಿ ಸುತ್ತಿ ಮುಂದುವರಿಯಬೇಕಾಗುತ್ತದೆ; ಬಹಳವಾಗಿ ಕಷ್ಟಪಡಬೇಕಾಗುತ್ತದೆ. ಹೃದಯದಲ್ಲಿ ರಾಗಾಭಕ್ತಿಯುಂಟಾಯಿತು ಎಂದರೆ, ಆಗ ಎಲ್ಲವೂ ಸುಲಭವಾಗಿಬಿಡುತ್ತದೆ. ಇದು, ಗದ್ದೆ ಕಟಾವಾದ ನಂತರ ಅವುಗಳ ಮೇಲೆ ಯಾವ ದಿಕ್ಕಿಗೆ ಅಂದರೆ ಆ ದಿಕ್ಕಿಗೆ ಹೋಗಬಹುದಲ್ಲ, ಹಾಗೆ. ಕಟಾವಿಗೆ ಮುಂಚೆ ತೆವರಿಗಳ ಮೇಲೆ ಸುತ್ತಿ ಸುತ್ತಿ ಹೋಗಬೇಕಾಗಿತ್ತು, ಅನಂತರ ಯಾವ ದಿಕ್ಕಿಗೆ ಬೇಕಾದರೂ ಹೋಗಬಹುದು. ಒಂದು ಪಕ್ಷ ಗದ್ದೆಯಲ್ಲಿ ಕೂಳೆ ಇರುವುದಾದರೆ, ಕಾಲಿಗೆ ಮೆಟ್ಟುಹಾಕಿಕೊಂಡು ಹೋಗಿಬಿಟ್ಟರೆ ಯಾವ ತೊಂದರೆಯೂ ಆಗದು. ವಿವೇಕ, ವೈರಾಗ್ಯ, ಗುರುವಾಕ್ಯದಲ್ಲಿ ಶ್ರದ್ಧೆ ಇವು ಇದ್ದುವು ಎಂದರೆ ಸಾಧಕನಿಗೆ ಯಾವ ಕಷ್ಟವೂ ಉಂಟಾಗದು.

ಶ್ರೀರಾಮಕೃಷ್ಣ ವಚನವೇದದಿಂದ